## ಸಾಹಿತ್ಯ ಸಿಂಚನ

### ಗುರು ಚರಣ

ಗುರುವೆ ನಿನ್ನನೇ ನಂಬಿ;
ಕುಳಿತಿಹೆನು ನಾ ಮನದುಂಬಿ!
ಕಲಿಯಲು ನಾ ಬಂದಿರುವೆ;
ಹರಸು ನೀ ಎದೆ ತುಂಬಿ!

ಗುರು ಚರಣ ಸ್ಪರ್ಶವೇ ಶಕ್ತಿ;
ನೀನಿಲ್ಲದೆ ಇಲ್ಲ ಮುಕ್ತಿ!
ಗುರುವಿನ ಆಸರೆ–ಆಶೀರ್ವಾದ;
ಜೀವನ ಗೆಲುವಿನ ಯುಕ್ತಿ!

ಕಲಿಕೆಯ ನಾನಾ ಮಜಲು;
ಬೆನ್ನಹಿಂದೆ ಗುರು ನೀನಿರಲು!
ಭಯ ಭಕ್ತಿ ಎನ್ನಲಿ ತುಂಬಿ;
ಸಾಧನೆಯ ದಾರಿ ನೀ ತೋರಲು!

ಜ್ಞಾನಕೆ ನೀನೇ ಉಸಿರು;
ಕಲಿತರೆ ನನ್ನ ಬಾಳೇ ಹಸಿರು!
ವೇದಶಾಸ್ತ್ರ ಆಧ್ಯಾತ್ಮದ ಸಾರವು;
ಉಣಿಸಲು ಕೆನೆ ಹಾಲು ಮೊಸರು!

ಗುರುವೇ ನಿನ್ನಯ ಮಹಿಮೆ;
ನೀ ನನ್ನ ಬಾಳಿನ ಚಿಲುಮೆ!
ಗುರಿ ತೋರುವ ನಿನ್ನಯ ಲೀಲೆ;
ಜಗಕೆ ನೀನೊಂದು ಗರಿಮೆ!

**ಡಾ ಮಹೇಂದ್ರ ಕುರ್ಡಿ**

## ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯಲ್ಲಿ ವಿಜೃಂಭಣೆಯ ಶಿಕ್ಷಕರ ದಿನಾಚರಣೆ

❏ ನೈಜ್ಯ ದೆಸೆ ನ್ಯೂಸ್



ಬಳಗಾನೂರು: ಪಟ್ಟಣದ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯಲ್ಲಿ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆಯ ನಿಮಿತ್ತ ಶಿಕ್ಷಕರ ದಿನಾಚರಣೆಯನ್ನು ಅತ್ಯಂತ ಸಂಭ್ರಮ ಹಾಗೂ ಉತ್ಸಾಹದಿಂದ ಆಚ–ರಿಸಲಾಯಿತು.ಸಂಪೂರ್ಣವಾಗಿ ವಿದ್ಯಾರ್ಥಿಗಳೇ ಶ್ರಮ ವಹಿಸಿ ಇಷ್ಟಪಟ್ಟು ಆಯೋಜಿಸಿದ್ದ ಈ ಕಾರ್ಯಕ್ರಮವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಶಾಲೆಯ ಮುಖ್ಯ ಗುರುಗಳು ಹಾಗೂ ನೌಕರವರ್ಗದವರು ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ವಿದ್ವತ್ಪೂರ್ಣ ಚಾಲನೆ ನೀಡಿದರು.ವಿದ್ಯಾರ್ಥಿನಿ ಯಶೋಧಾ ಅವರ ನಿರೂಪಣೆಯಲ್ಲಿ ಮೂಡಿಬಂದ ಈ ಕಾರ್ಯಕ್ರಮಕ್ಕೆ ವಿದ್ಯಾರ್ಥಿನಿ ಸಿಂಚನಾ ಅದ್ಭುತವಾಗಿ ಸ್ವಾಗತ ಕೋರಿದರು. ತದನಂತರ ಹಲವು ವಿದ್ಯಾರ್ಥಿ–ವಿದ್ಯಾರ್ಥಿನಿಯರು ವೇದಿಕೆಯನ್ನೇರಿ ಶಿಕ್ಷಕರ ಕುರಿತು ತಮ್ಮ ಅನಿಸಿಕೆ ಹಾಗೂ ಗೌರವ ಭಾವನೆಗಳನ್ನು ವ್ಯಕ್ತಪಡಿಸಿದರು.ಸಭಾ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಶಿಕ್ಷಕರಿಗಾಗಿ ವಿವಿಧ ಆಟಗಳನ್ನು ಆಯೋಜಿಸಿದ್ದರು. ಗುರುಗಳು ಉತ್ಸಾಹದಿಂದ ಆಟಗಳಲ್ಲಿ ಪಾಲ್ಗೊಂಡಿದ್ದನ್ನು ಕಂಡ ವಿದ್ಯಾರ್ಥಿ ಬಳಗ ಚಪ್ಪಾಳೆ ತಟ್ಟಿ ಕುಣಿದು ಕುಪ್ಪಳಿಸಿ ಸಂಭ್ರಮಿಸಿತು.ಕಾರ್ಯಕ್ರಮದ ಕೊನೆಯಲ್ಲಿ ಶಿಕ್ಷಕ–ಶಿಕ್ಷಕಿಯರು ಮಕ್ಕಳ ಪ್ರೀತಿಯ ಉಡುಗೊರೆಗಳನ್ನು ಹಾಗೂ ಶುಭಾಶಯಗಳನ್ನು ಸ್ವೀಕರಿಸಿ ಹಾರೈಸಿದರು. ವಿದ್ಯಾರ್ಥಿನಿ ಶ್ರೇಯಾ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಅರ್ಥಪೂರ್ಣವಾಗಿ ಸಂಪನ್ನಗೊಂಡಿತು.

# ಜಾಲಹಳ್ಳಿಯಲ್ಲಿ ಬಿಡಾಡಿ ದನಗಳ ಹಾವಳಿ ನಿಯಂತ್ರಣಕ್ಕೆ ಗ್ರಾಪಂ ಕ್ರಮ: ಗೋಶಾಲೆಗೆ ರವಾನೆ

❏ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ, ಸೆ.6: ಪಟ್ಟಣದಲ್ಲಿ ಹೆಚ್ಚುತ್ತಿರುವ ಬಿಡಾಡಿ ದನಗಳ ಹಾವಳಿಯಿಂದ ಸಾರ್ವಜನಿಕರು ಹಾಗೂ ರೈತರಿಗೆ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಾಲಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಕ್ರಮ ಕೈಗೊಳ್ಳಲಾಗಿದೆ.ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಶ್ರೀಮತಿ ಲಕ್ಷ್ಮೀ ಹಾಗೂ ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ವೈಶಾಲಿ ಜಳಕಿ ಅವರ ನೇತೃತ್ವದಲ್ಲಿ ಅಧಿಕಾ–ರಿಗಳು ಹಾಗೂ ಸಿಬ್ಬಂದಿ ಬಿಡಾಡಿ ದನಗಳನ್ನು ಹಿಡಿದು ಗೋಶಾಲೆಗೆ ರವಾನೆ ಮಾಡುವ ಕಾರ್ಯ ನಡೆಸಿದರು.ಗ್ರಾಮದ ಸಾರ್ವಜನಿಕರು ಹಾಗೂ ರೈತರ ಮನವಿಯ ಮೇರೆಗೆ ಹಿಡಿಯಲಾದ ಜಾನುವಾರುಗಳ ಮಾಲೀಕ–ರಿಗೆ ದನಗಳನ್ನು ಬಿಡುಗಡೆ ಮಾಡಲಾಯಿತು.




ಗ್ರಾಮ ಪಂಚಾಯಿತಿಯಿಂದ ಪ್ರತಿ ಜಾನುವಾ–ರಿಗೆ ₹5,000 ದಂಡ ನಿಗದಿಪಡಿಸಲಾಗಿ–ತ್ತು. ಆದರೆ ಸಾರ್ವಜನಿಕರು ಹಾಗೂ ರೈತರ ಮನವಿ ಮತ್ತು ಪರಸ್ಪರ ಒಪ್ಪಿಗೆಯ ಮೇರೆಗೆ ಪ್ರತಿ ಜಾನುವಾರಿಗೆ ₹1,500 ದಂಡ ವಿಧಿಸಿ ಬಿಡುಗಡೆ ಮಾಡಲಾಯಿತು.ಇನ್ನು ಮುಂದೆ ಜಾನುವಾರುಗಳನ್ನು ಸಾರ್ವಜನಿಕ ರಸ್ತೆಯಲ್ಲಿ ಬಿಡುವುದಿಲ್ಲ ಎಂದು ಮಾಲೀಕರಿಂದ ಮುಚ್ಚಳಿಕೆ ಪತ್ರ ಪಡೆಯಲಾಯಿತು. ರಸ್ತೆಗಳಲ್ಲಿ ಬಿಡಾಡಿ ದನಗಳನ್ನು ಬಿಡುವುದರಿಂದ ವಾಹನ ಸವಾರರಿಗೆ ಅಪಾಯ ಉಂಟಾಗುವುದಲ್ಲದೆ, ಸಾರ್ವಜನಿಕರ ಸಂಚಾರಕ್ಕೂ ತೊಂದರೆಯಾಗುತ್ತದೆ. ಆದ–ರಿಂದ ಮುಂದಿನ ದಿನಗಳಲ್ಲಿ ನಿಯಮ ಉಲ್ಲಂಘಿಸಿ ದನಗಳನ್ನು ರಸ್ತೆಗೆ ಬಿಟ್ಟರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಪಂಚಾಯಿತಿ ಅಧಿಕಾರಿಗಳು ಎಚ್ಚರಿಕೆ ನೀಡಿದರು.ಈ ಸಂದರ್ಭದಲ್ಲಿ ಊರಿನ ಮುಖಂಡರಾದ ದುರ್ಗಪ್ಪ ರಾಮ್ ಪಾಳಿ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಲಕ್ಷ್ಮೀ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಬಿಲ್ ಕಲೆಕ್ಟರ್ ವೆಂಕೋಬ, ಬಸವರಾಜ್, ಮುದರಂಗಪ್ಪ, ನಾಗರಾಜ್ ಸೇ–ರಿದಂತೆ ಪಂಚಾಯಿತಿ ಸಿಬ್ಬಂದಿ ಉಪಸ್ಥಿತರಿದ್ದರು. ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ಬಾದರ್ಲಿಯಲ್ಲಿ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ನೂತನ ಕಟ್ಟಡ ಉದ್ಘಾಟನೆ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಉತ್ತಮ ವಸತಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ನಿರ್ಮಿಸಲಾದ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ನೂತನ ಕಟ್ಟಡವನ್ನು ಮಾನ್ಯ ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ ಸಾಹೇಬರು ತಮ್ಮ ಸ್ವಗ್ರಾಮವಾದ ಬಾದರ್ಲಿಯಲ್ಲಿ ಉದ್ಘಾಟಿಸಿದರು. ಗ್ರಾಮೀಣ ಪ್ರದೇಶದ ಮಕ್ಕಳಿಗೂ ನಗರ ಪ್ರದೇಶದ ವಿದ್ಯಾರ್ಥಿಗಳಂತೆ ಉತ್ತಮ ಶಿಕ್ಷಣ ಮತ್ತು ಅಗತ್ಯ ಮೂಲಸೌಕರ್ಯಗಳು ದೊರೆಯಬೇಕು ಎಂಬ ಆಶಯದೊಂದಿಗೆ ನಿರ್ಮಿಸಲಾಗಿರುವ ಈ ನೂತನ ಕಟ್ಟಡವು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಹೊಸ ಅವಕಾಶಗಳನ್ನು ತೆರೆದಿದೆ. ಉತ್ತಮ ವಸತಿ, ಕಲಿಕಾ ವಾತಾವರಣ ಹಾಗೂ ಅಗತ್ಯ ಸೌಲಭ್ಯಗಳ ಮೂಲಕ ಮಕ್ಕಳ ಉಜ್ವಲ ಭವಿಷ್ಯಕ್ಕೆ ಭದ್ರ ಬುನಾದಿ ಹಾಕುವಲ್ಲಿ ಈ ವಸತಿ ಶಾಲೆ ಪ್ರಮುಖ ಪಾತ್ರ ವಹಿಸಲಿದೆ.ತಂದೆ-ಮಗನ ಜನಸೇವೆಗೆ ಜನರಿಂದ ಮೆಚ್ಚುಗೆಶ್ರೀ ಹಂಪನಗೌಡ ಬಾದರ್ಲಿ ಅವರು ಕ್ಷೇತ್ರದ ಜನಪ್ರತಿನಿಧಿಯಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸುವುದರ ಜೊತೆಗೆ ಶಿಕ್ಷಣ, ಆರೋಗ್ಯ, ರಸ್ತೆ ಹಾಗೂ ಮೂಲಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡುತ್ತಿದ್ದಾರೆ. ಅವರೊಂದಿಗೆ ಪುತ್ರರಾದ ಶ್ರೀ ಬಾಬುಗೌಡ ಬಾದರ್ಲಿ ಅವರೂ ಜನರೊಂದಿಗೆ ನಿರಂತರವಾಗಿ ಬೆರೆತು, ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ, ಅವುಗಳ ಪರಿಹಾರಕ್ಕಾಗಿ ಶ್ರಮಿಸುತ್ತಿರುವುದು ಸ್ಥಳೀಯರಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ.ಹಂಪನಗೌಡ ಬಾದರ್ಲಿ ಹಾಗೂ








ಬಾಬುಗೌಡ ಬಾದರ್ಲಿ ಅವರ ತಂದೆ-ಮಗನ ಜೋಡಿ ಜನಸೇವೆಗೆ ಮತ್ತಷ್ಟು ಬಲ ನೀಡಿದ್ದು, ಕ್ಷೇತ್ರದ ಅಭಿವೃದ್ಧಿಗಾಗಿ ಒಗ್ಗಟ್ಟಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ. ಗ್ರಾಮೀಣ ಮಕ್ಕಳ ಭವಿಷ್ಯಕ್ಕೆ ಶಿಕ್ಷಣವೇ ಬಲಗ್ರಾಮೀಣ ಭಾಗದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳ ಕೊರತೆಯಿಲ್ಲ. ಆದರೆ ಸೂಕ್ತ ಶಿಕ್ಷಣ, ವಸತಿ ಹಾಗೂ ಮೂಲಸೌಕರ್ಯಗಳ ಕೊರತೆಯಿಂದಾಗಿ ಅನೇಕ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಸಮರ್ಪಕವಾಗಿ ಬೆಳೆಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ನೂತನ ಕಟ್ಟಡ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶ ಒದಗಿಸಲಿದೆ.ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಉತ್ತಮವಾಗಿ ವಿದ್ಯಾಭ್ಯಾಸ ಮಾಡಿ, ಭವಿಷ್ಯದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸುವ ಮೂಲಕ ತಮ್ಮ ಕುಟುಂಬ, ಗ್ರಾಮ ಹಾಗೂ ನಾಡಿಗೆ ಕೀರ್ತಿ ತರಬೇಕು ಎಂದು ಗಣ್ಯರು ಆಶಿಸಿದರು. ಜನರ ಅಗತ್ಯಗಳನ್ನು ಅರಿತು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರುವ ಶಾಸಕ ಹಂಪನಗೌಡ ಬಾದರ್ಲಿ ಅವರ ಕಾರ್ಯವೈಖರಿ ಹಾಗೂ ಜನರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಸೇವೆ ಸಲ್ಲಿಸುತ್ತಿರುವ ಬಾಬುಗೌಡ ಬಾದರ್ಲಿ ಅವರ ಪ್ರಯತ್ನಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.ಶಿಕ್ಷಣದ ಮೂಲಕ ಸಬಲೀಕರಣ – ಮಕ್ಕಳ ಉಜ್ವಲ ಭವಿಷ್ಯವೇ ಸಂಕಲ್ಪ. ಜನರ ಸೇವೆಯೇ ಗುರಿ, ಕ್ಷೇತ್ರದ ಅಭಿವೃದ್ಧಿಯೇ ಧ್ಯೇಯ ಎಂಬ ಆಶಯದೊಂದಿಗೆ ಹಂಪನಗೌಡ ಬಾದರ್ಲಿ ಹಾಗೂ ಬಾಬುಗೌಡ ಬಾದರ್ಲಿ ಅವರ ಸೇವಾ ಕಾರ್ಯಗಳು ಮುಂದುವರಿಯಲಿ ಎಂಬುದು ಸಾರ್ವಜನಿಕರ ಆಶಯವಾಗಿದೆ.

# ಸಂಗೊಳ್ಳಿ ರಾಯಣ್ಣ ಸಹಕಾರಿ ಸಂಘದ 14ನೇ ವಾರ್ಷಿಕ ಸಭೆ

❏ ನೈಜ್ಯ ದೆಸೆ ನ್ಯೂಸ್

ಕವಿತಾಳ:– ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಹಕಾರ ಸಂಘ ಪ್ರಾರಂಭದಲ್ಲಿ 4 ಲಕ್ಷ ರೂಪಾಯಿ ಬಂಡವಾಳದಿಂದ ಆರಂಭಿಸಿದ್ದು. ಪ್ರಸ್ತುತ ಸಾಲಿನಲ್ಲಿ 99 ಕೋಟಿ 8 ಲಕ್ಷ ಬಂಡವಾಳ ಹೊಂದಿದೆ 2025–26ನೇ ಸಾಲಿನಲ್ಲಿ1 ಕೋಟಿ 53 ಲಕ್ಷ 52 ಸಾವಿರ ರೂಪಾಯಿ ನಿವ್ವಳ ಲಾಭ ಗಳಿಸಿದೆ ಎಂದು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಡಾ ಶಿವಣ್ಣ ವಕೀಲರು ಹೇಳಿದರು.ಪಟ್ಟಣದ ಶ್ರೀ ಕ್ರಾಂತಿವೀರ ಸಹಕಾರಿ ಸಂಘದ ಕಛೇ–ರಿಯಲ್ಲಿ 14ನೇ ವರ್ಷದ ವಾರ್ಷಿಕ ಸಭೆಯನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು.ಸಹಕಾರಿ ಸಂಘಗಳಲ್ಲಿ



ಕಾರ್ಯ ನಿರ್ವಹಿಸುವ ಸಿಬ್ಬಂದಿ ಆಡಳಿತ ಮಂಡಳಿಯ ಸಾಮಾಜಿಕ ಸೇವೆಯ ಮನೋಭಾವ ಹೊಂದಿರಬೇಕು.ಸಹಕಾರಿ ಸಂಘವು ಸಾಲ ನೀಡುವ ಮುಂಚೆ ಸೂಕ್ತ ಗ್ರಾಹಕರನ್ನು ಆಯ್ಕೆ ಮಾಡಿಕೊಳ್ಳುವುದು ಮುಖ್ಯ. ನೀಡಿದ ಸಾಲ ಮರುಪಾವತಿಸಲು ಸಿಬ್ಬಂದಿ ಗ್ರಾಹಕರೊಂದಿಗೆ ಸಹೋದರ ಸಹಕಾರ ಮನೋಭಾವ ಹೊಂದಿರಬೇಕು, ಸಂಸ್ಥೆ ಇಷ್ಟು ಎತ್ತರಕ್ಕೆ ಸಂಸ್ಥೆ ಬೆಳೆಯಲು ಸಿಬ್ಬಂದಿ ಶ್ರಮ ನಿರ್ದೇಶಕರ ಕಾಳಜಿ ಗ್ರಾಹಕರ ಸಹಕಾರ ಮುಖ್ಯವಾಗಿದೆ ಎಂದರು. ಶೇರುದಾರರಿಗೆ ಶೇ. 18 ರಷ್ಟು ಲಾಭಾಂಶ ಹಣ ಹಂಚಿಕೆ ಮಾಡಲಾಗುತ್ತಿದೆ ಎಂದು ಘೋಷಣೆ ಮಾಡಿದರು.ದೇವಾನಂದ್ ರಾವ್ ಮಾತನಾಡಿ ಸಹಕಾರಿ ಸಂಘ ಅಭಿವೃದ್ಧಿ ಹೊಂದಬೇಕಾದರೆ ಆಡಳಿತ ಮಂಡಳಿಯ ನಿಸ್ವಾರ್ಥ ಸೇವೆಯಿಂದ ಮಾತ್ರ ಅಭಿವೃದ್ಧಿ ಸಾಧ್ಯ ಈ ಸಂಸ್ಥೆ ಉತ್ತಮ ಬೆಳವಣಿಗೆಯತ್ತ ಸಾಗುತ್ತಿದೆ ಸಂಗೊಳ್ಳಿ ರಾಯಣ್ಣ ಸಹಕಾರಿ ಇನ್ನೂ ಹೆಚ್ಚಿನ ಮಟ್ಟಕ್ಕೆ ಬೇಳೆಯಲಿ ಎಂದು ಹೇಳಿದರು. ಸಹಕಾರಿಯನ್ನು ಉದೇಶಿಸಿ ಸಹಕಾರಿ ನಿರ್ದೇಶಕ ಮಲ್ಲಿಕಾರ್ಜುನ ಜಕ್ಕಲದಿನ್ನಿ, ಶಿವಗೇನಪ್ಪ ಉಪನ್ಯಾಸಕರು ಮಾತನಾಡಿದರ ಕಾರ್ಯಕ್ರಮದ ನಿರೂಪಣೆ ಮತ್ತು ವಾರ್ಷಿಕ ವರದಿಯನ್ನು ಸಹಕಾರಿಯ ಮುಖ್ಯ ವ್ಯವಸ್ಥಾಪಕ ಶಿವಕುಮಾರ ಹಣಿಗಿ ಅವರು ನೆರವೇರಿಸಿದರು. ಲೆಕ್ಕಪರಿಶೋಧಕರ ನೇಮಕಾತಿಯನ್ನು ಸಿಬ್ಬಂದಿ ಮಹಾಲಿಂಗಪ್ಪ ನಂದವಾಡಗಿ ಮಾಡಿದರು.ಲಾಭಾಂಶ ವರದಿಯನ್ನು ಸಿಬ್ಬಂದಿ ಮಂಜುನಾಥ. ಕೆ ಮಂಡಿಸಿದರು.ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷ ಕರಿಯಪ್ಪ ಪೂಜಾರಿ ಯಕ್ಲಾಸಪೂರ, ಮಾಜಿ ಜಿಲ್ಲಾ ಪಂಚಾಯತ ಸದಸ್ಯ ಮಾಳಪ್ಪ ತೋಳ, ಮಾಜಿ ತಾಲ್ಲೂಕು ಪಂಚಾಯತ ಸದಸ್ಯ ಕರಿಯಪ್ಪ ತೋಳ, ಕರಿಯಪ್ಪ ಪೂಜಾರಿ, ಮೌಲಸಾಬ್ ಗಣದಿನ್ನಿ, ಶಿವರಾಜ ದಿನ್ನಿ, ನಂದೀಶ ತೋಪ್ಪಲದೊಡ್ಡಿ, ಮಲ್ಲಯ್ಯ ಮೇದಾರ, ಪ್ರವೀಣ್ ಬಸವರಾಜ ರೂಢಗಿ ಸೇರಿದಂತೆ ಸಿಬ್ಬಂದಿಗಳು ಗ್ರಾಹಕರು ಇದ್ದರು.

# ಸಪ್ತಗಿರಿ ಸಹಕಾರ ಸಂಘಕ್ಕೆ 14 ಲಕ್ಷ ನಿವ್ವಳ ಲಾಭ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಪಟ್ಟಣದ ಐತಿಹಾಸಿನ ಸೋಮಪ್ಪ ದೇವಸ್ಥಾನ ಬಳಿಯ ಗದ್ದೆ ಚೌಡೇಶ್ವರಿ ದೇವಿ ದೇವಾಲಯ ಆವರಣದಲ್ಲಿ ಸಪ್ತಗಿರಿ ಪತ್ತಿನ ಸಹಕಾರ ಸಂಘದ 13ನೇ ವಾರ್ಷಿಕ ಮಹಾಜನ ಸಭೆ ಭಾನುವಾರ ನಡೆಯಿತು. ಸಂಘದ ವಾರ್ಷಿಕ ಮಹಾಜನ ಸಭೆಯನ್ನು ಸಂಘದ ಅಧ್ಯಕ್ಷ ಡಾ.ವೆಂಕಟೇಶ ಸಿ.ಭರಮಕ್ಕನವರು ಉದ್ಘಾಟಿಸಿ ಮಾತನಾಡಿ, ಸಂಘವು 956ಸದಸ್ಯರನ್ನು ಹೊಂದಿದ್ದು, ಸುಮಾರು 27.24ಸಾವಿರ ರೂ.ಗಳ ಶೇರು ಬಂಡವಾಳ ಹೊಂದಿದೆ. ಸುಮಾರು 2 ಕೋಟಿ 97 ಲಕ್ಷ 58ಸಾವಿರ ಠೇವಣಿ ಸಂಗ್ರಹಿಸಿದೆ. ವಾಹನ ಸಾಲ, ಅಡಮಾನ ಸಾಲ ಸೇರಿದಂತೆ



ಸುಮಾರು 3 ಕೋಟಿ 29 ಲಕ್ಷ 53 ಸಾವಿರ ಸಾಲ ವಿತರಿಸಲಾಗಿದೆ. ಸಂಘವು 2025–26ನೇ ಸಾಲಿನ ಸುಮಾರು 18 ಲಕ್ಷ ನಿವ್ವಳ ಲಾಭಗಳಿಸಿದೆ. ಸಹಕಾರ ಸಂಘದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು.ನಂತರ ಮುಖ್ಯ ಕಾರ್ಯನಿರ್ವಾಹಕ ಎಸ್.ಎಂ.ನಾಗರಾಜ ವಾರ್ಷಿಕ ವರದಿ ಮಂಡಿಸಿದರು.ಈ ಸಂದರ್ಭದಲ್ಲಿ ಉಪಾಧ್ಯಕ್ಷ ಯು.ದೊಡ್ಡಬಸಪ್ಪ, ನಿರ್ದೇಶಕರಾದ ವಿ.ಗೋವಿಂದಪ್ಪ, ಎನ್.ಬಿ.ಮಂಜುನಾಥ, ಎನ್. ರಾಮಾಂಜಿನೇಯಲು, ಜಿ.ಪಕ್ಕೀರಪ್ಪ, ಕೆ.ಪಾರ್ವತಿ ಕೋಟಿ, ಬಿ.ನಾರಾಯಣಪ್ಪ, ಜೆ. ವೆಂಕಟೇಶ ಶ್ರೇಷ್ಠಿ, ಓ.ಪಿ.ದಾದಾಖಲಂದರ್, ಎನ್.ವಿರೇಶ, ಆನಂದ ಹೆಚ್.ಹುಲ್ಲೂರ್, ಜೆ.ಲಕ್ಷ್ಮೀದೇವಿ, ವಿ.ಅನೀಲ್ ಕುಮಾರ, ಆಕಾಶ ಭರಮಕ್ಕನವರು, ಸಿಬ್ಬಂದಿಗಳಾದ ಕನಕಪ್ಪ ಎನ್, ದಸ್ತಗಿರಿ, ಉಮಾ, ಹುಲಿಗೆಮ್ಮ, ಕೆ. ರಾಘವೇಂದ್ರ, ಬಸವರಾಜ ಇದ್ದರು.ವರದಿ : ಜಿಲಾನಸಾಬ್ ಬಡಿಗೇರ್

## ನೇಮಕಾತಿ ಪ್ರಕಟಣೆ

KFD ನೇಮಕಾತಿ 2026 – 750 ಅರಣ್ಯ ವೀಕ್ಷಕ (Forest Observer) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ 31 ಆಗಸ್ಟ್ 2026KFD ನೇಮಕಾತಿ 2026: 750 ಅರಣ್ಯ ವೀಕ್ಷಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಅರಣ್ಯ ಇಲಾಖೆಯು ಜುಲೈ 2026ರ ಅಧಿಕೃತ ಅಧಿಸೂಚನೆಯ ಮೂಲಕ ಅರಣ್ಯ ವೀಕ್ಷಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 31–ಆಗಸ್ಟ್–2026 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: aranya.gov.in

## ಶಿಕ್ಷಕರು ಭವ್ಯ ಭಾರತದ ನಿರ್ಮಾಪಕರು: ಅಕ್ಕಮ್ಮ ಅಕ್ಕನವರು

ನೈಜ್ಯ ದೆಸೆ ನ್ಯೂಸ್



ಮಾನ್ವಿ : ಪಟ್ಟಣದ ವಿಶ್ವ ಚೇತನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಅಂಗವಾಗಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಓಂ ಮಂಡಳಿ ಶಿವಶಕ್ತಿ ಅವತಾರ ಸೇವಾ ಸಂಸ್ಥಾನ, ಮಾನ್ವಿಯ ಸಂಚಾಲಕರಾದ ಅಕ್ಕಮ್ಮ ಅಕ್ಕನವರು, "ವಿದ್ಯಾರ್ಥಿಗಳಲ್ಲಿರುವ ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸಿ, ಅವರ ಬದುಕಿನಲ್ಲಿ ಸುಜ್ಞಾನವೆಂಬ ಬೆಳಕನ್ನು ಮೂಡಿಸುವ ಮೂಲಕ ಭವ್ಯ ಭಾರತದ ನಿರ್ಮಾಣದಲ್ಲಿ ಶಿಕ್ಷಕರು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ" ಎಂದು ಹೇಳಿದರು.ಶಿಕ್ಷಕ ಚೆನ್ನಬಸವರಾಜ ಮಾತನಾಡಿ, ಶಿಕ್ಷಕರಾಗಿ ಸೇವೆ ಸಲ್ಲಿಸುವುದು ಪೂರ್ವಜನ್ಮದ ಪುಣ್ಯ. ವಿದ್ಯಾರ್ಥಿಗಳು ಪರಿಶ್ರಮದ ಮೂಲಕ ಜ್ಞಾನವನ್ನು ಪಡೆದು, ಸಂಸ್ಕಾರವಂತರಾಗಿ ಬೆಳೆದು ತಂದೆ–ತಾಯಿ ಹಾಗೂ ಅಕ್ಷರ ಜ್ಞಾನ ನೀಡಿದ ಗುರುಗಳಿಗೆ ಒಳ್ಳೆಯ ಹೆಸರು ತರಬೇಕು ಎಂದು ತಿಳಿಸಿದರು.ಶಿಕ್ಷಕಿ ಬುಷಿರಾ ಮಾತನಾಡಿ, ಶಿಕ್ಷಕ ಮತ್ತು ವಿದ್ಯಾರ್ಥಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇಬ್ಬರೂ ಪರಸ್ಪರ ಸಹಕಾರದಿಂದ ಮುನ್ನಡೆದಾಗ ದೇಶಕ್ಕೆ ಮಹತ್ವದ ಕೊಡುಗೆ ನೀಡಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಕಾರ್ಯಕ್ರಮದ ಆರಂಭದಲ್ಲಿ ಹರ್ಷಿತಾ ಹಾಗೂ ಸಂಗಡಿಗರು ಪ್ರಾರ್ಥನೆ ಸಲ್ಲಿಸಿದರು. ಹರ್ಷಾ ಪಾಟೀಲ್ ಸರ್ವರನ್ನು ಸ್ವಾಗತಿಸಿದರು. ಮುಖ್ಯೋಪಾಧ್ಯಾಯರಾದ ನಂದಿತಾ ಅವರು ಕಾರ್ಯಕ್ರಮದ ಉದ್ದೇಶದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.ವೇದಿಕೆಯ ಮೇಲೆ ಕಾರ್ಯದರ್ಶಿ ಗೀತಾ ಹಿರೇಮಠ, ಸಂಸ್ಥಾಪಕರಾದ ಎಂ.ಎಂ. ಹಿರೇಮಠ ಹಾಗೂ ಶಾಲೆಯ ಎಲ್ಲಾ ಶಿಕ್ಷಕರು ಉಪಸ್ಥಿತರಿದ್ದರು.ಶಿಕ್ಷಕರಿಗಾಗಿ ಆಯೋಜಿಸಿದ್ದ ವಿವಿಧ ಕ್ರೀಡಾಕೂಟಗಳಲ್ಲಿ ವಿಜೇತರಾದ ಶಿಕ್ಷಕ–ರಿಗೆ ವಿದ್ಯಾರ್ಥಿಗಳಿಂದ ಬಹುಮಾನ ವಿತರಿಸಲಾಯಿತು. ನಂತರ ಶಿಕ್ಷಕರಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿ–ತ್ತು.ಕೊನೆಯಲ್ಲಿ ವಿದ್ಯಾರ್ಥಿನಿ ಶಿರಿಷಾ ವಂದಿಸಿದರು.

# ವರಲಕ್ಷ್ಮೀ ಕ್ರೆಡಿಟ್ ಸಹಕಾರ ಸಂಘದ 23ನೇ ವಾರ್ಷಿಕ ಮಹಾಜನ ಸಭೆ ಜರಿಗಿತ್ತು

ನೈಜ್ಯ ದೆಸೆ ನ್ಯೂಸ್





ಬಳ್ಳಾರಿ / ಕಂಪ್ಲಿ: ವರಲಕ್ಷ್ಮೀ ಕ್ರೆಡಿಟ್ ಸಹಕಾರ ಸಂಘವು ಕಳೆದ 23 ವರ್ಷಗಳಿಂದ ಸಂಘದ ಸದಸ್ಯರ ಸ್ವಾವಲಂಬಿ ಬದುಕಿಗೆ ಪ್ರೇರಣೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಸಂಘದ ಅಧ್ಯಕ್ಷ ಹೆಚ್.ಜಗದೀಶ ಹೇಳಿದರು.ಪಟ್ಟಣದ ವೀರಶೈವ ಸಂಘದ ಪೇಟೆ ಬಸವೇಶ್ವರ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವರಲಕ್ಷ್ಮೀ ಕ್ರೆಡಿಟ್ ಸಹಕಾರ ಸಂಘದ 23ನೇ ವಾರ್ಷಿಕ ಮಹಾಜನ ಸಭೆ ಉದ್ಘಾಟಿಸಿ ಮಾತನಾಡಿ, ಕಂಪ್ಲಿ ಸೇ–ರಿದಂತೆ ಬಳ್ಳಾರಿ, ವಿಜಯನಗರ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಒಳಗೊಳ್ಳುವ ಜೊತೆಗೆ ತಾಲೂಕು ಕೇಂದ್ರಗಳಲ್ಲಿ ಬ್ಯಾಂಕ್ ಶಾಖೆಗಳನ್ನು ಸ್ಥಾಪಿಸಲಾಗಿದೆ. ಸಂಘವು 13439ಸದಸ್ಯರೊಂದಿಗೆ ಸುಮಾರು 9ಕೋಟಿ 68 ಲಕ್ಷ ಶೇರು ಬಂಡವಾಳ ಹೊಂದಿದೆ. ಸುಮಾರು 18 ಕೋಟಿ 48 ಲಕ್ಷ ಠೇವಣಿ ಸಂಗ್ರಹವಾಗಿದೆ. ವಾಹನ, ಬಂಗಾರ, ಜಾಮೀನು ಸೇರಿದಂತೆ ವಿವಿಧ ಸಾಲದಂತೆ ಸುಮಾರು 107 ಕೋಟಿ 5ಲಕ್ಷ 99 ಸಾವಿರ ಸಾಲ ವಿತ–ರಿಸಲಾಗಿದ್ದು, ಶೇ. 90ರಷ್ಟು ವಸೂಲಾತಿ ಸಾಧನೆ ಮಾಡಿದೆ. ಸಂಘವು 2024–25ನೇ ಸಾಲಿನಲ್ಲಿ ಸುಮಾರು 5 ಕೋಟಿ 6 ಲಕ್ಷ 53 ಸಾವಿರ 595 ರೂ.ಗಳ ನಿವ್ವಳ ಲಾಭ ಹೊಂದಿದೆ. ಪ್ರತಿಯೊಬ್ಬರ ಸಹಕಾರದೊಂದಿಗೆ ಸಂಘವು ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಎಂದರು.ನಂತರ ಮುಖ್ಯ ಕಾರ್ಯನಿರ್ವಾಹಕ ಎಂ.ಲೋಕೇಶ್ವರ ರೆಡ್ಡಿ ಇವರು ವಾರ್ಷಿಕ ವರದಿಯನ್ನು ಮಂಡಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಟಿ.ಕೊಟ್ರೇಶ, ನಿರ್ದೇಶಕರಾದ ಹೆಚ್.ಮಂಜುನಾಥ, ಡಿ.ವೀರಪ್ಪ, ವಾಲಿ ಕೊಟ್ರಪ್ಪ, ಕೆ.ಸಣ್ಣ ಗವಿಸಿದ್ದಪ್ಪ, ಚಂದ್ರಶೇಖರ ಬಣಗಾರ, ಜಿ.ವೀರನಗೌಡ, ಕವಿತಾಳ ಚನ್ನಪ್ಪ, ಡಾ.ವೀನಗೌಡ ಎಸ್.ಪಾಟೀಲ್, ಕೆ.ಉಷಾರಾಣಿ, ಪಕ್ಕೀರಪ್ಪ, ಎನ್.ಯಂಕಪ್ಪ, ಎನ್.ಅಯ್ಯಪ್ಪ, ಹಾಗೂ ಸಿಬ್ಬಂದಿಗಳಾದ ವಿಜಯ, ಮಂಜು, ಡಿ.ಜಿ.ಪಾಟೀಲ್, ವಿರೇಶ, ಬೀರಪ್ಪ, ಶಿವಪ್ಪ ಸೇರಿದಂತೆ ಅನೇಕ–ರಿದ್ದರು.ವರದಿ : ಜಿಲಾನಸಾಬ್ ಬಡಿಗೇರ್

## ವಸತಿ ಶಾಲೆಯ ಹಾಗೂ ವಸತಿ ನಿಲಯದಲ್ಲಿ ಮಕ್ಕಳ ಆರೋಗ್ಯದ ದೃಷ್ಟಿಯಿಂದ ಯಾವುದೇ ನ್ಯೂನ್ಯತೆಯಿಲ್ಲದಂತೆ ಕಾರ್ಯನಿರ್ವಹಿಸೋಣ.

ನೈಜ್ಯ ದೆಸೆ ನ್ಯೂಸ್



ಮಾನವಿ,: ವಿಧ್ಯಾಭ್ಯಾಸ ನಿರತ ಮಕ್ಕಳ ಆರೋಗ್ಯದ ದೃಷ್ಟಿಯಿಂದ ವಸತಿ ಶಾಲೆ, ವಸತಿ ನಿಲಯಗಳಲ್ಲಿ ಅಡುಗೆ ಸಿಬ್ಬಂದಿ ಮಕ್ಕಳಿಗಾಗಿ ಸಿದ್ದಪಡಿಸುವ ಆಹಾರವನ್ನು ಅತ್ಯಂತ ಜಾಗರೂಕತೆಯಿಂದ ನೋಡಿಕೊಳ್ಳುವ ಜೊತೆಗೆ ನಿಯಮಿತವಾಗಿ ಆರೋಗ್ಯ ಇಲಾಖೆಯ ವೈದ್ಯಕೀಯ ತಂಡದ ಮೂಲಕ ತಪಾಸಣೆ ಮಾಡಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ತಿಳಿಸಿದರು. ಮಾನವಿ ಪಟ್ಟಣದ ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಉಪಹಾರ ಸೇವನೆ ನಂತರ ಮಕ್ಕಳಲ್ಲಿ ಅಸ್ವಸ್ಥತೆ ಕಂಡು ಹಿನ್ನೆಲೆಯಲ್ಲಿ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾದ ಮಕ್ಕಳನ್ನು ಹಾಗೂ ವಸತಿ ನಿಲಯದ ಮಕ್ಕಳನ್ನು ಮಾತನಾಡಿಸಿ ಧೈರ್ಯ ತುಂಬುವ ಜೊತೆಗೆ, ವೈದ್ಯಕೀಯ ತಂಡದೊಂದಿಗೆ ಅಡುಗೆ ಮನೆ, ಆಹಾರ ಪದಾರ್ಥಗಳ ದಾಸ್ತಾನು ಪದ್ದತಿ, ತರಕಾರಿ ಸ್ವಚ್ಚಗೊಳಿಸಿ ವಿಧಾನ, ಕುಡಿಯುವ ನೀರು ಸಂಗ್ರಹ ಪರಿಶೀಲಿಸಿದರಲ್ಲದೆ ಸಿಬ್ಬಂದಿಯವರೊಂದಿಗೆ ಮಾತನಾಡುತ್ತಾ, ಪ್ರತಿದಿನ ಆಹಾರ ಸಿದ್ಧಪಡಿಸುವಾಗ ನಿಗಾವಹಿಸುವುದು, ನೆಲದ ಮೇಲೆ ಕಾಯಿಪಲ್ಲೆ ಹಾಕದಂತೆ, ದವಸ ಧಾನ್ಯಗಳ ಬಳಿ ಇಲಿ ಇತರೆ ಕೀಟಗಳು ಸುಳಿಯದಂತೆ, ತರಕಾರಿಗಳನ್ನು ಶುದ್ಧ ನೀರಿನಲ್ಲಿ ತೊಳೆಯುವುದು, ಸಿದ್ದಪಡಿಸದ ಆಹಾರವನ್ನು ಪ್ರತ್ಯೇಕವಾಗಿಡುವುದು.ವಿವಿಧ ಕಾಳುಗಳನ್ನು ಡಬ್ಬಗಳಲ್ಲಿ ಇಡುವುದು, ಅಡುಗೆ ಸಾಮಗ್ರಿಗಳ ಸ್ವಚ್ಛ ಮಾಡುವ ಸ್ಥಳದಲ್ಲಿ ನೀರು ಹರಿದು ಹೋಗುವಂತೆ ಪ್ರತಿ ದಿನ ಫಿನಾಯಿಲ್ ಮೂಲಕ ನೆಲ ಸ್ವಚ್ಚಗೊಳಿಸಲು ತಿಳಿಸಿದರು. ಮುಖ್ಯವಾಗಿ ಮಕ್ಕಳಿಗೆ ಊಟ ಬಡಿಸುವ ಪೂರ್ವದಲ್ಲಿ ಕೈಗಳನ್ನು ಸಾಬೂನು ಮತ್ತು ನೀರಿನಿಂದ ಚೆನ್ನಾಗಿ ತೊಳೆದುಕೊಳ್ಳುವುದನ್ನು ಮರೆಯಬಾರದು ಎಂದು ತಿಳಿಸಿದರು.ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ್ ಕೆ ಮಾತನಾಡಿ, ಮಕ್ಕಳು ಮನೆಯಲ್ಲಾಗಲಿ, ವಸತಿ ನಿಲಯದಲ್ಲಾಗಲಿ ವೈಯಕ್ತಿಕ ಸ್ವಚ್ಚತೆಯ ಕಡೆ ಗಮನಹರಿಸಿ, ಶುದ್ಧವಾದ ನೀರು ಸೇವಿಸಿ, ಊಟದ ಮೊದಲು ಹಾಗೂ ಶೌಚದ ನಂತರ ಕೈಗಳನ್ನು ತಪ್ಪದೆ ಸಾಬೂನು ಮತ್ತು ನೀರಿನಿಂದ ತಪ್ಪದೆ ತೊಳೆಯಬೇಕು, ಆಹಾರವು ಬಿಸಿಯಾಗಿರುವಾಗಲೆ ಸೇವಿಸಿ, ಯಾ–ರಿಗಾದರೂ ಆರೋಗ್ಯದಲ್ಲಿ ವ್ಯತ್ಯಾಸವೆನಿಸಿದರೆ ತಕ್ಷಣ ವೈದ್ಯರ ಬಳಿ ತೊರಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ ಶಿವಕುಮಾರ್ ನಾರಾ, ತಾಲೂಕಾ ಆರೋಗ್ಯಾಧಿಕಾರಿ ಡಾ ಶರಣಬಸವರಾಜ್, ಮಕ್ಕಳ ತಜ್ಞರಾದ ಡಾ ಶರಣಪ್ಪ, ಪ್ರಾಂಶುಪಾಲ ವೆಂಕಟೇಶ್ ನಾಯಕ, ವಾರ್ಡನ್ ರಮೇಶ ನಾಯಕ, ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಕನಕಾಚಲ ಪದಕಿ, ಹಿರಿಯ ಹೆಚ್ಐಓ ಶೇಖರ, ಹಿರಿಯ ಪಿಹೆಚ್‌ಸಿಓ ಪದ್ಮಾ, ಬಿಪಿಎಮ್ ರಾಜೇಶ್ ಆರ್, ಸೇರಿದಂತೆ ಶಿಕ್ಷಕರು, ಅಡುಗೆ ಸಿಬ್ಬಂದಿ ಉಪಸ್ಥಿತರಿದ್ದರು.

# ದೇವದುರ್ಗ ತಾಲೂಕಿಗೆ ಶೀಘ್ರ ಬರ ಪರಿಹಾರ ಬಿಡುಗಡೆಗೆ ಆಗ್ರಹ

ನೈಜ್ಯ ದೆಸೆ ನ್ಯೂಸ್



ರಾಯಚೂರು, ಸೆ.6: ಕರ್ನಾಟಕ ಸರ್ಕಾರವು ದೇವದುರ್ಗ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿದ್ದರೂ, ಇದುವರೆಗೆ ಕಂದಾಯ ಇಲಾಖೆಯ ಅಧಿಕಾರಿಗಳು ರೈತರ ಜಮೀನುಗಳಿಗೆ ಭೇಟಿ ನೀಡಿ ಬೆಳೆ ಹಾನಿ ಕುರಿತು ಸಮರ್ಪಕ ಪರಿಶೀಲನೆ ನಡೆಸಿಲ್ಲ ಎಂದು ಆರೋಪಿಸಿ, ಶೀಘ್ರ ಬರ ಪರಿಹಾರ ಬಿಡುಗಡೆಗೆ ಆಗ್ರಹಿಸಿ ಜಾಲಹಳ್ಳಿ ಗ್ರಾಮದ ರೈತರು ರಾಯಚೂ–ರಿನ ಜಂಟಿ ಕೃಷಿ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.ದೇವದುರ್ಗ ತಾಲೂಕನ್ನು ಸರ್ಕಾರ ಬರಪೀಡಿತ ಪ್ರದೇಶವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ಅರ್ಹ ರೈತರಿಗೆ ಸರ್ಕಾರದ ಬರ ಪರಿಹಾರ ತ್ವರಿತವಾಗಿ ತಲುಪಬೇಕಾಗಿದೆ. ಆದರೆ ಅಧಿಕಾರಿಗಳು ರೈತರ ಜಮೀನುಗಳಿಗೆ ಭೇಟಿ ನೀಡಿ ಬೆಳೆ ಹಾನಿ ಸಮೀಕ್ಷೆ ನಡೆಸದಿರುವುದರಿಂದ ಪರಿಹಾರ ಹಣ ಪಡೆಯಲು ವಿಳಂಬವಾಗುತ್ತಿದೆ ಎಂದು ರೈತರು ಮನವಿಯಲ್ಲಿ ತಿಳಿಸಿದ್ದಾರೆ.ಆದ್ದರಿಂದ ಸಂಬಂಧಪಟ್ಟ ಕಂದಾಯ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳು ಕೂಡಲೇ ಗ್ರಾಮಗಳಿಗೆ ಭೇಟಿ ನೀಡಿ ರೈತರ ಜಮೀನುಗಳ ಪರಿಶೀಲನೆ ನಡೆಸಬೇಕು. ಬೆಳೆ ಹಾನಿಯ ನೈಜ ಸ್ಥಿತಿಯನ್ನು ದಾಖಲಿಸಿ, ಅರ್ಹ ರೈತರಿಗೆ ಯಾವುದೇ ವಿಳಂಬವಿಲ್ಲದೆ ಬರ ಪರಿಹಾರ ಹಣ ಬಿಡುಗಡೆ ಮಾಡುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.ಈ ಸಂದರ್ಭದಲ್ಲಿ ಜಾಲಹಳ್ಳಿ ಗ್ರಾಮದ ಮುಖಂಡರಾದ ಶ್ರೀಧರ ದೇಸಾಯಿ, ಶಂಕರ್ ಗೌಡ ಮಾಲಿ ಪಾಟೀಲ್, ವೆಂಕೋಬ ತೋಟದ್, ಜಾಲಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ವಿರೇಶ್ ಅರಕೇರಿ,ಸಲಬಣ್ಣ ಹಂಪರಗುಂದಿ ದೇವದುರ್ಗ ತಾಲೂಕು ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಅಬ್ದುಲ್ ರಹಮಾನ್ ಖುರೇಶಿ, ಸೇರಿದಂತೆ ಹಲವು ರೈತರು ಉಪಸ್ಥಿತರಿದ್ದರು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಾರ್ವಜನಿಕರ ಸಹಕಾರ. ಶಾಸಕ ದರ್ಶನ್ ದ್ರುವ ನಾರಾಯಣ್

ನೈಜ್ಯ ದೆಸೆ ನ್ಯೂಸ್



ತಾಂಡವಪರತಾ ಸಪ್ಟೆಂಬರ್ 6 ಮೈಸೂರು ಜಿಲ್ಲೆ, ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಸೇರುವ ತಾಲೂಕುಪಂಚಾಯತ್ ಸಭಾಂಗಣದಲ್ಲಿ ಜನರ ಸಮಸ್ಯೆಗಳಿಗೆ ಸರ್ಕಾರವೇ ಸ್ಪಂದಿಸಿ, ಪರಿಹಾರ ಒದಗಿಸುವ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ 'ಪ್ರಜಾಸೇವಾ ಆಂದೋಲನ ಸಭೆ ಕಾರ್ಯಕ್ರಮವನ್ನು ಶಾಸಕ ದರ್ಶನ್ ಧ್ರುವನಾರಾಯಣ್ ರವರು ಉದ್ಘಾಟನೆ ನೆರವೇರಿಸಿ, ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರುನಂಜನಗೂಡು ತಾಲೂಕಿನ ವಿವಿಧ ಗ್ರಾಮಗಳಿಂದ ಬಂದಿದ್ದ ಸಾರ್ವಜನಿಕರಿಂದ ಅಹವಾಲುಗಳಅರ್ಜಿಗಳನ್ನು ಸ್ಥಳದಲ್ಲೇ ಸ್ವೀಕರಿಸಿ ಪರಿಹಾರ ನೀಡುವ ಮೂಲಕ ಪ್ರಜಾಸೇವೆ ನೂತನ ಕಾರ್ಯಕ್ರಮಕ್ಕೆ ತಾಲ್ಲೂಕಿನಲ್ಲಿ ಚಾಲನೆ ನೀಡಲಾಯಿತು.ಸಾರ್ವಜನಿಕರು ತಮ್ಮ ಸಮಸ್ಯೆ ಹಾಗೂ ಅಹವಾಲುಗಳನ್ನು ನೇರವಾಗಿ ಸಲ್ಲಿಸಿ, ಸಾಧ್ಯವಾದಷ್ಟು ಸ್ಥಳದಲ್ಲೇ ಪರಿಹಾರ ಪಡೆಯಬಹುದು. ಸರ್ಕಾರ ಜನರ ಬಳಿಗೆ ಬಂದು, ಅವರ ಸಮಸ್ಯೆಗಳನ್ನು ಆಲಿಸಿ, ತ್ವರಿತವಾಗಿ ಪರಿಹಾರ ನೀಡುವುದು 'ಪ್ರಜಾಸೇವೆ'ಯ ಮುಖ್ಯ ಉದ್ದೇಶ. ಎಂದು ಹೇಳಿದರು ಸರ್ಕಾರವೇ ಜನರ ಬಾಗಿಲಿಗೆ ಬಂದು, ಜನರ ಸಮಸ್ಯೆಗಳನ್ನು ಆಲಿಸಿ, ಅವುಗಳಿಗೆ ಪರಿಹಾರ ಕಲ್ಪಿಸುವ ಈ ಮಹತ್ವದ ಜನಪರ ಹೆಜ್ಜೆಯ ಮೂಲಕ ಆಡಳಿತವನ್ನು ಜನರ ಬಳಿಗೆ ಕೊಂಡೊಯ್ಯುವಲ್ಲಿ ಮಹತ್ವದ ಹೆಜ್ಜೆಯಾಗಿದೆ. ಎಂದು ಶಾಸಕರು ತಿಳಿಸಿದರುಪ್ರಜಾ ಸೇವೆ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಸ್ಮಿತಾ ರಾಮು ರವರು, ನಗರಸಭಾ ಆಯುಕ್ತರಾದ ಬಸವರಾಜ್ ರವರು, ಇಓ ಜೆರಾಲ್ಡ್ ರಾಜೇಶ್ ರವರು ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕರು ಮುಖಂಡರುಗಳು ವಿವಿಧ ಇಲಾಖೆ ಅಧಿಕಾ–ರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು

# ಜಾಲಹಳ್ಳಿ ಪಿಡಿಒ, ಕಾರ್ಯದರ್ಶಿ ವರ್ಗಾವಣೆ ಮಾಡದಂತೆ ಜಿಪಂ ಸಿಇಒಗೆ ಮನವಿ

ನೈಜ್ಯ ದೆಸೆ ನ್ಯೂಸ್



ದೇವದುರ್ಗ, ಸೆ.5: ತಾಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಹಾಗೂ ಕಾರ್ಯದರ್ಶಿಯವರನ್ನು ಯಾವುದೇ ಕಾರಣಕ್ಕೂ ವರ್ಗಾವಣೆ ಮಾಡದೆ, ಹಾಲಿ ಸ್ಥಾನದಲ್ಲಿಯೇ ಮುಂದುವ–ರಿಸುವಂತೆ ಒತ್ತಾಯಿಸಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಈರಪ್ಪ ಅರಿಕೇರಾ ಅವರು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.ಜಾಲಹಳ್ಳಿ ದೊಡ್ಡ ಗ್ರಾಮವಾಗಿದ್ದು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಹಲವು ಸಾರ್ವಜನಿಕ ಸಮಸ್ಯೆಗಳು ಎದುರಾಗುತ್ತಿವೆ. ಇಂತಹ ಸಂದರ್ಭದಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಪಿಡಿಒ ಹಾಗೂ ಕಾರ್ಯದರ್ಶಿಯವರನ್ನು ವರ್ಗಾವಣೆ ಮಾಡಿದರೆ ಪಂಚಾಯಿತಿಯ ಆಡಳಿತಾತ್ಮಕ ಕಾರ್ಯಗಳು ಹಾಗೂ ಗ್ರಾಮದ ಅಭಿವೃದ್ಧಿ ಚಟುವಟಿಕೆಗಳಿಗೆ ತೊಂದರೆಯಾಗುವ ಸಾಧ್ಯತೆಯಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.ಪಂಚಾಯಿತಿಯ ಅಭಿವೃದ್ಧಿ ಕಾಮಗಾರಿಗಳು, ಸಾರ್ವಜನಿಕರ ಸಮಸ್ಯೆಗಳ ಪರಿಹಾರ ಹಾಗೂ ದಿನನಿತ್ಯದ ಆಡಳಿತ ಕಾರ್ಯಗಳು ಸುಗಮವಾಗಿ ನಡೆಯಲು ಹಾಲಿ ಪಿಡಿಒ ಹಾಗೂ ಕಾರ್ಯದರ್ಶಿಯವರನ್ನು ಇನ್ನೂ ಕೆಲವು ದಿನಗಳ ಕಾಲ ಜಾಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿಯೇ ಮುಂದುವ–ರಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.ಮನವಿ ಪತ್ರದ ಪ್ರತಿಯನ್ನು ದೇವದುರ್ಗ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ಸಲ್ಲಿಸಲಾಗಿದೆ.ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಈರಪ್ಪ ಅರಿಕೇರಾ, ಗ್ರಾಮದ ಮುಖಂಡರಾದ ಶ್ರೀಧರ್ ದೇಸಾಯಿ, ಶಂಕರ್ ಗೌಡ ಮಾಲಿಪಾಟೀಲ್, ವೆಂಕೋಬ ತೋಟದ್, ಗ್ರಾಮ ಪಂಚಾಯಿತಿ ಸದಸ್ಯ ಸಲಬಣ್ಣ ಹಂಪರಗುಂದಿ, ಬಿಜೆಪಿ ತಾಲೂಕು ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಅಬ್ದುಲ್ ರಹಮಾನ್ ಖುರೇಶಿ ಸೇ–ರಿದಂತೆ ಇತರರು ಉಪಸ್ಥಿತರಿದ್ದರು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ವಚನ ದರ್ಶನ

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ
ಅಂಬುಜಕೆ ಭಾನುವಿನ ಉದಯದ ಚಿಂತೆ
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ ಎನಗೆ
ನಮ್ಮ ಕೂಡಲಸಂಗನ ಶರಣರ ನೆನೆವುದೆ ಚಿಂತೆ

12ನೇ ಶತಮಾನದ ಸಾಮಾಜಿಕ ಕ್ರಾಂತಿ–ಕಾರಿ, ಭಕ್ತಿ ಚಳುವಳಿಯ ಹರಿಕಾರ ಶ್ರೀ ವಿಶ್ವಗುರು ಬಸವಣ್ಣನವರ ಅತ್ಯಂತ ಜನಪ್ರಿಯ ವಚನವಾಗಿದೆ.ಪ್ರಕೃತಿಯ ಸಹಜ ನಿಯಮಗಳ ಮೂಲಕ ಭಗವಂತ ಮತ್ತು ಭಕ್ತನ ನಡುವೆ ಇರಬೇಕಾದ ಅನನ್ಯ ಮತ್ತು ಅವಿನಾಭಾವ ಸಂಬಂಧವನ್ನು ಬಸವಣ್ಣನವರು ಈ ವಚನದಲ್ಲಿ ಅತ್ಯಂತ ಮಾರ್ಮಿಕವಾಗಿ ವಿವರಿಸಿದ್ದಾರೆ.ಸರಳ ಭಾವಾರ್ಥ:ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ.ಚಕೋರ ಎಂಬ ಕಾಲ್ಪನಿಕ ಪಕ್ಷಿಯು ಕೇವಲ ಚಂದ್ರನ ಬೆಳಕನ್ನು ಕಿರಣಗಳನ್ನು ಕುಡಿದೇ ಜೀವಿಸುತ್ತದೆ ಎಂಬ ನಂಬಿಕೆಯಿದೆ. ಹಾಗಾಗಿ ಅದು ಸದಾ ಚಂದ್ರನ ಬೆಳಕಿಗಾಗಿ ಕಾತರಿಸುತ್ತಿರುತ್ತದೆ.ಅಂಬುಜಕೆ ಭಾನುವಿನ ಉದಯದ ಚಿಂತೆ. ಅಂಬುಜ ಎಂದರೆ ತಾವರೆ ಹೂವು. ಸೂರ್ಯ ಉದಯಿಸಿದಾಗ ಮಾತ್ರ ತಾವರೆ ಅರಳುತ್ತದೆ. ಹಾಗಾಗಿ ತಾವರೆಗೆ ಸದಾ ಸೂರ್ಯನ ಉದಯದ ಮೇಲೆಯೇ ಗಮನವಿರುತ್ತದೆ.ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ. ಭ್ರಮರ ಎಂದರೆ ದುಂಬಿ ಜೇನನೊಣ ದುಂಬಿಗೆ ಹೂವಿನ ಸುಗಂಧವನ್ನು ಆಸ್ವಾದಿಸುತ್ತಾ, ಅದರಲ್ಲಿರುವ ಮಕರಂದವನ್ನು ಜೇನನ್ನು ಹೀರುವುದರ ಕಡೆಯೇ ಚಿಂತೆ.ಎನಗೆ ನಮ್ಮ ಕೂಡಲಸಂಗಮದೇವನ ನೆನೆವುದೇ ಚಿಂತೆ. ಮೇಲಿನ ಉದಾಹರಣೆಗಳಂತೆ, ಬಸವಣ್ಣನವರು "ನನ್ನ ಮನಸ್ಸು ಕೂಡ ಅಷ್ಟೇ ಸಹಜವಾಗಿ, ನಿರಂತರವಾಗಿ ನನ್ನ ಆರಾಧ್ಯ ದೈವವಾದ ಕೂಡಲಸಂಗಮದೇವನನ್ನು ಸ್ಮ–ರಿಸುವುದರಲ್ಲೇ ಮುಳುಗಿರಲಿ" ಎಂದು ಆಶಿಸುತ್ತಾರೆ.ಪ್ರಕೃತಿಯಲ್ಲಿ ಹೇಗೆ ಜೀವ ಜಗತ್ತು ತನಗೆ ಬೇಕಾದ ಮೂಲ ಸೆಲೆಯೊಂದಿಗೆ ನಿಕಟ ಸಂಪರ್ಕ ಹೊಂದಿದೆಯೋ, ಅದೇ ರೀತಿ ಒಬ್ಬ ಭಕ್ತನಿಗೆ ದೇವರ ಸ್ಮರಣೆ ಎಂಬುದು ಬಲವಂತದ್ದಾಗಿರದೆ, ಅತ್ಯಂತ ಸ್ವಾಭಾವಿಕ ಹಾಗೂ ನಿರಂತರ ಪ್ರಕ್ರಿಯೆಯಾಗಿರಬೇಕು ಎಂಬುದೇ ಈ ವಚನದ ಸಂದೇಶವಾಗಿದೆ. ಆದರೆ ವಚನಗಳು ನಮಗೆ ನೀಮಗೆ ದಾರಿದೀಪವಾಗಿವೆ. ಶರಣು ಶರಣಾರ್ಥಿಗಳು.

**– ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ ಸಿಂಧನೂರು**






# ಗ್ಯಾರಂಟಿ ಪ್ರಚಾರದಲ್ಲೇ ಕಾಂಗ್ರೆಸ್ ಕಾಲಹರಣ : ಮುಂದಿನ ದಿನದಲ್ಲಿ ಕಾಂಗ್ರೆಸ್ ನಿರ್ನಾಮ : ಬಿ.ವೈ.ವಿಜಯೇಂದ್ರ ವಿಜಯಾಸ್ತ್ರ

❑ ನೈಜ್ಯ ದೆಸೆ ನ್ಯೂಸ್

**ಮುಖ್ಯಾಂಶಗಳು: ಪಾದಯಾತ್ರೆಯಲ್ಲಿ ಭ್ರಷ್ಟ ಕಾಂಗ್ರೆಸ್ ವೈಫಲ್ಯ ವಿರುದ್ಧ ವಿಜಯಾಸ್ತ್ರ ಬೀರಿದರು. ಕಾಂಗ್ರೆಸ್ ಮೇಲೆ ಹರಿಹಾಯ್ದ ಬಿಜೆಪಿಗರು ಬಳ್ಳಾರಿ ಚಲೋ ಪಾದಯಾತ್ರೆ**
**ಕಂಪ್ಲಿ–ಕೋಟೆಯಲ್ಲಿ ನದಿಗೆ ಬಾಗಿನ ಅರ್ಪಣೆ**
**ಮೆರವಣಿಗೆಗೆ ಕಲಾ ತಂಡಗಳ ಮೆರಗು**
**ಹರಿದು ಬಂದ ಜನ ಸಾಗರ**
**ಎಲ್ಲೆಂದರಲ್ಲಿ ರಾರಾಜಿಸಿದ ಬಿಜೆಪಿ ಧ್ವಜ**
**ಕ್ರೇನ್ ಮೂಲಕ ಪುಷ್ಪವೃಷ್ಠಿ ಸ್ವಾಗತಿಸಲಾಯಿತು.**









ಬಳ್ಳಾರಿ / ಕಂಪ್ಲಿ: ಗ್ಯಾರಂಟಿ ಪ್ರಚಾರದಲ್ಲೇ ರಾಜ್ಯದ ಕಾಂಗ್ರೆಸ್ ಸರ್ಕಾರ ಕಾಲಹರಣ ಮಾಡುತ್ತಿದ್ದು, ಇದರಿಂದ ರೈತ ಮತ್ತು ಜನ ಸಾಮಾನ್ಯರ ಬದುಕಿಗೆ ಕಂಟಕವಾಗಿದ್ದು, ಬರುವ ದಿನದಲ್ಲಿ ಜನರೇ ಕಾಂಗ್ರೆಸ್ ನಿರ್ಮೂಲನೆ ಮಾಡಲು ಪಣ ತೊಟ್ಟಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿ–ಜಯೇಂದ್ರ ಗುಡುಗಿದರು.ಪಟ್ಟಣದಲ್ಲಿ ಕಾಂಗ್ರೆಸ್ ದುರಾಡಳಿತದ ವಿರುದ್ಧ ಭಾನುವಾರಂದು 6ನೇ ದಿನದ ಬಳ್ಳಾರಿ ಚಲೋ ಬೃಹತ್ ಪಾದಯಾತ್ರೆಯ ಬಹಿರಂಗ ಸಭೆಯಲ್ಲಿ ಮಾತನಾಡಿ, ರೈತರ ಜೀವನಾಡಿ ತುಂಗಭದ್ರ ಜಲಾಶಯ ಭರ್ತಿಯಾದರೂ ಈ ಭಾಗದ ರೈತ–ರಿಗೆ ಸಮರ್ಪಕವಾಗಿ ನೀರು ಕೊಡುವಲ್ಲಿ ಸ್ಥಳೀಯ ಶಾಸಕ ಸೇರಿದಂತೆ ರಾಜ್ಯ ಸರ್ಕಾರ ವಿಫಲವಾಗಿದೆ. ರೈತರು ಮತ್ತು ಜನರು ಸಂಕಷ್ಟದಲ್ಲಿದ್ದರೂ ಸಿಎಂ ಡಿ.ಕೆ.ಶಿವಕುಮಾರ ಅವರು ಬೆಂಗಳೂರು ಅಪ್ಪಿಕೊಂಡು ಕೂತಿದ್ದಾರೆ. ಮತ್ತು ರಿಯಲ್ ಎಷ್ಟೇಟ್‌ನಲ್ಲಿದ್ದಾರೆ. ಬಡವರ ಬಿಪಿಎಲ್ ಕಾರ್ಡ ಕಿತ್ತಿಕೊಂಡಿದ್ದಾರೆ. ಗ್ಯಾರಂಟಿಗೆ ಹಣ ಕ್ರೂಢಿಕರಣಕ್ಕಾಗಿ ಮದ್ಯದ ದರ ಹೆಚ್ಚಿನ ಕುಡುಕರ ಸಾಮ್ರಾಜ್ಯವನ್ನಾಗಿ ಮಾಡಿದ್ದಾರೆ. ಗ್ಯಾರಂಟಿಗಳೊಂದಿಗೆ ಸಾಕಷ್ಟು ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದ ರಾಜ್ಯದ ಕಾಂಗ್ರೆಸ್ ಸರ್ಕಾರ ಭಷ್ಟಾಚಾರದ ಮೂಲಕ ರೈತ, ಜನ ವಿರೋಧಿ ದುರಾಡಳಿತ ನಡೆಸುತ್ತಿರುವ ಡಿ.ಕೆ.ಶಿವುಕುಮಾರ ಸರ್ಕಾರವನ್ನು ಮುಂದಿನ ದಿನದಲ್ಲಿ ಮತ ಬಾಂಧವರೇ ಬುಡ ಸಮೇತವಾಗಿ ಕಿತ್ತಿ ಹಾಕಲು ಸಜ್ಜಾಗಿದ್ದಾರೆ ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.ಗಂಗಾವತಿ ಹಾಲಿ ಶಾಸಕ ಗಾಲಿ ಜನಾರ್ದನರೆಡ್ಡಿ ಮಾತನಾಡುವಾಗ ಕಂಪ್ಲಿ ಜನರ ಪ್ರೀತಿ, ವಿಶ್ವಾಸಕ್ಕೆ ಬಾವುಕರಾಗಿ ನಿಮ್ಮ ಋಣ ತೀ–ರಿಸುತ್ತೇನೆ. ವಾಲ್ಮೀಕಿ ಹಣ ಲೂಟಿ ಮಾಡಿ, ಸಂಸದರ ಚುನಾವಣೆಗೆ ಬಳಿಸಿದ್ದೀರಿ. ಇದರ ಪಾಪ, ಕೆಟ್ಟ ಕರ್ಮ ನಿಮಗೆ ಸುತ್ತಿಕೊಂಡಿದೆ. ಕಂಪ್ಲಿ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಮರಿಚಿಕೆಯಾಗಿವೆ. 14 ವರ್ಷದ ಬಳ್ಳಾರಿ ಜನರಿಂದ ದೂರ ಮಾಡಿ, ನಮ್ಮಲ್ಲಿರುವ ಕೆಲವು ಸಣ್ಣಪುಟ್ಟ ವ್ಯತ್ಯಸಗಳಿಂದ ಅಧಿಕಾರಕ್ಕೆ ಬಂದಿದ್ದೀರಿ. ಶಾಸಕ ಗಣೇಶ, ನಾಚಿಗೆ ಇಲ್ಲದ ಗಣೇಶ. ರಿಯಾಲ್ ಎಷ್ಟೇಟ್ ದಂಧೆ ಮಾಡಿಯಲ್ಲ. ನಮ್ಮ ಅನುಪಸ್ಥಿತಿಯಲ್ಲಿ ಗೆದ್ದು, ನನ್ನ ಬೆಂಬಲವಿದೆ ಎಂದೇಳಿ ಗೆಲ್ಲಿದ್ಧೀಯಾ ನೀನು. ಇನ್ಮೇಲೆ ನೋಡಿ ಮುಂದಿನ ಚುನಾವಣೆಯಲ್ಲಿ ಸೋಲಿಸಿಯೇ ತೀರುತ್ತೇನೆ. ಬರುವ ದಿನಗಳಲ್ಲಿ 10 ವಿಧಾನಸಭಾ ಕ್ಷೇತ್ರದಲ್ಲಿ ಗೆಲ್ಲುತ್ತೇವೆ. ಕಂಪ್ಲಿ ಕ್ಷೇತ್ರದಲ್ಲಿ ಸುರೇಶ್ ಬಾಬು ಅವರನ್ನು ಗೆಲ್ಲಿಸಿಕೊಂಡು ಬರುತ್ತೇವೆ ಎಂದು ಗುಡುಗಿದರು.ಮಾಜಿ ಸಚಿವ ಬಿ.ಶ್ರೀರಾಮುಲು ಮಾತನಾಡಿ, ದಲಿತ ಮತ್ತು ಹಿಂದುಳಿದ ಸಮುದಾಯವನ್ನು ಕಾಂಗ್ರೆಸ್ ಸಂಪೂರ್ಣವಾಗಿ ಕಡೆಗಣಿಸಿದೆ. ದುರಂಕಾರದ ಸಿಎಂ ಆಗಿದ್ದಾರೆ. ಸದನ ವ್ಯರ್ಥ ಮಾಡಿದ್ದಾರೆ. ಹಿಂದುಳಿದ ನಾಯಕ ಸಿದ್ದರಾಮಯ್ಯನವರನ್ನು ಮೂಲೆಗುಂಪು ಮಾಡಿದ್ದಾರೆ. ಸಿದ್ದರಾಮಯ್ಯನವ ಬೆನ್ನಿಗೆ ಚೂರಿ ಹಾಕಿದ್ದಾರೆ. ಎರಡು ಬೆಳೆ ನಷ್ಟವಾಗಿದೆ. ರೈತರು ನೀರಿಗಾಗಿ ಕಣ್ಣೀರು ಹಾಕುತ್ತಿದ್ದಾರೆ. ಡಿ.ಕೆ.ಶಿವುಕುಮಾರ ಹೆಜ್ಜೆ ಗುರುತೇನಪ್ಪಾ. ಸಮಾನಾಂತರ ಜಲಾಶಯದೊಂದಿಗೆ ಈ ಭಾಗದ ರೈತರಿಗೆ ಎರಡು ಬೆಳೆಗೆ ನೀರು ಕೊಡಬೇಕೆಂಬ ಸಂಕಲ್ಪವಾಗಿದೆ ಎಂದರು. ಮಾಜಿ ಶಾಸಕ ಟಿ.ಎಚ್.ಸುರೇಶ ಬಾಬು ಮಾತನಾಡಿ, ಪಾದಯಾತ್ರೆಯಿಂದ ಕಾಂಗ್ರೆಸ್‌ಗೆ ನಡುಕ ಹುಟ್ಟಿದೆ. ಕರೆಂಟ್ ತಗೆದು ರಾಜಕಾರಣ ಮಾಡುತ್ತಿದ್ದಾರೆ. ಎಸ್ಸಿ, ಎಸ್ಟಿ ಹಣ ನುಂಗಿದ್ದಾರೆ. ಹಗರಣದಲ್ಲಿ ಶಾಸಕರು ಭಾಗಿಯಾಗಿದ್ದಾರೆ. ನಿಷ್ಟವಂತ ಕಾರ್ಯಕರ್ತರ ಮೇಲೆ ಜಾತಿ ನಿಂದನೆ ಕೇಸು ಹಾಕಿಸುತ್ತಿದ್ದಾರೆ ಎಂದು ಆಕ್ರೋಶ ಹೊರ ಹಾಕಿದರು.*ಬಾಗಿನ ಅರ್ಪಣೆ* :ಕಂಪ್ಲಿಗೆ ಆಗಮಿಸುತ್ತಿದ್ದಂತೆ ಜನಪ್ರಿಯ ನಾಯಕ ಟಿ.ಎಚ್.ಸುರೇಶ ಬಾಬು ನೇತೃತ್ವದಲ್ಲಿ ಬಿಜೆಪಿ ನಾಯಕರನ್ನು ಅದ್ದೂರಿಯಾಗಿ ಸ್ವಾಗತಿಸಿದರು. ನಂತರ ಇಲ್ಲಿನ ತುಂಗಭದ್ರಾ ನದಿಯಲ್ಲಿ ಮೊದಲಿಗೆ ಹರಿಯುವ ನೀರಿಗೆ ಬಾಗಿಲ ಅರ್ಪಿಸಿ, ಪಾದಯಾತ್ರೆ ಆರಂಭಿಸಿದರು. *ಭವ್ಯ ಸ್ವಾಗತ* : ಕಾಂಗ್ರೆಸ್ ವಿರುದ್ಧ ತೊಡೆಗಟ್ಟಿರುವ ಬಿಜೆಪಿ ಲಿಂಗಸೂಗೂರಿನಿಂದ ಆರಂಭಗೊಂಡ ಬಳ್ಳಾರಿ ಚಲೋ ಬೃಹತ್ ಪಾದಯಾತ್ರೆ ಗಂಗಾವತಿಯ ಕನಕಗಿರಿ ಕ್ಷೇತ್ರ ವ್ಯಾಪ್ತಿಯ ಚಿಕ್ಕಜಂತಕಲ್ ಗ್ರಾಮದ ಮೂಲಕ ತುಂಗಭದ್ರಾ ನದಿ ಸೇತುವೆಯಲ್ಲಿ ಹೆಜ್ಜೆ ಹಾಕುತ್ತಾ, ಭಾನುವಾರ ಸಂಜೆ ಗಣಿ ಜಿಲ್ಲೆಯ ಹೆಬ್ಬಾಗಿಲು ಕಂಪ್ಲಿಗೆ ಪ್ರವೇಸಿಸಿತು. ಇಲ್ಲಿನ ಕಂಪ್ಲಿ–ಕೋಟೆಯಲ್ಲಿ ವಿವಿಧ ಕಲಾ ತಂಡಗಳ ಮುಖೇನ ಮಾಜಿ ಶಾಸಕ ಟಿ.ಎಚ್.ಸುರೇಶ್ ಬಾಬು ನೇತೃತ್ವದಲ್ಲಿ ಕಾರ್ಯಕರ್ತರು ಬಿಜೆಪಿ ನಾಯಕರನ್ನು ಅದ್ದೂರಿಯಾಗಿ ಸ್ವಾಗತಿಸಿದರು. ನಂತರ ತೆರೆದ ವಾಹನದಲ್ಲಿ ಗಂಡುಗಲಿ ಕುಮಾರ ರಾಮನ ಕೋಟೆ ಮೂಲಕ ಜೋಗಿ ಕಾಲುವೆ, ಹಳೇ ಪೊಲೀಸ್ ಠಾಣೆ, ನಡುವಲ ಮಸೀದಿ, ಡಾ.ರಾಜಕುಮಾರ ರಸ್ತೆ, ಮಾರೆಮ್ಮ ಗುಡಿ, ಅಂಬೇಡ್ಕರ್ ವೃತ್ತದಲ್ಲಿ ಸಮಾವೇಶಗೊಂಡು, ನಂತರ ಬೃಹತ್ ಬಹಿರಂಗ ಸಭೆ ನಡೆಸಿದರು. ಪಾದಯಾತ್ರೆಯುದ್ದಕ್ಕೂ ಕಾಂಗ್ರೆಸ್ ವಿರುದ್ಧದ ಘೋಷಣೆಗಳೊಂದಿಗೆ ಹೆಜ್ಜೆ ಹಾಕಿದರು.*ರಾರಾಜಿಸಿದ ಬ್ಯಾನರ್, ಧ್ವಜಗಳು* :–ರಾಜ್ಯ ಕಾಂಗ್ರೆಸ್ ವಿರುದ್ಧದ ಬೃಹತ್ ಪಾದಯಾತ್ರೆ ಹಿನ್ನಲೆ ಪಟ್ಟಣದ ಪ್ರವೇಶ ದ್ವಾರದಿಂದ ಪ್ರಮುಖ ರಸ್ತೆಗಳಲ್ಲಿ ಬ್ಯಾನರ್, ಧ್ವಜಗಳು ಬಿಜೆಪಿ ನಾಯಕರನ್ನು ಭವ್ಯವಾಗಿ ಸ್ವಾಗತಿಸುವ ಜೊತೆಗೆ ಎಲ್ಲೆಂದರಲ್ಲಿ ರಾರಾಜಿಸಿ, ಇದು ವಿಜಯಯಾತ್ರೆಯೋ ಎಂಬಂತೆ ಕಂಡು ಬಂತು. ಗಂಗಾವತಿಯ ಚಿಕ್ಕಜಂತಕಲ್ ಮೂಲಕ ಬರುವ ತುಂಗಭದ್ರಾ ನದಿಯ ಎರಡು ಬದಿಯ ರಕ್ಷಣಾ ಕಂಬಿಗಳಲ್ಲಿ ಧ್ವಜಗಳು ಅಲಂಕೃತವಾಗಿದ್ದವು. ಬರುವ ಜನರ, ವಾಹನ ಸವಾರರ ಗಮನ ಸೆಳೆಯುತಿದ್ದವು. ಕಂಪ್ಲಿಯಲ್ಲಿ ಬಳ್ಳಾರಿ ಚಲೋ ಹಿನ್ನಲೆ ಅಂಬೇಡ್ಕರ್ ವೃತ್ತದಲ್ಲಿ ಸ್ವಾಗತದ ಬ್ಯಾನರಗಳ ಸದ್ದು ಕಂಡು ಬಂತು. *ಹರಿದು ಬಂದ ಜನಸಾಗರ* : ಪಾದಯಾತ್ರೆ ಹಿನ್ನಲೆ ಕಂಪ್ಲಿಗೆ ಕ್ಷೇತ್ರ ಸೇ–ರಿದಂತೆ ನಾನಾ ಕಡೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಜನಸಾಗರವೇ ಹರಿದು ಬಂದಿತು. ಮುಖಂಡರು, ಕಾರ್ಯಕರ್ತರು, ಜನರು ಪಾಲ್ಗೊಂಡು ಪಾದಯಾತ್ರೆಗೆ ಉತ್ಸಾಹ ನೀಡಿದರು. *ಟ್ರಾಫಿಕ್ ಜಾಮ್ ಜನ ಹೈರಾಣ* : 6ನೇ ದಿನವಾದ ಭಾನುವಾರದಂದು ಸಂಜೆ ಹೊತ್ತಿಗೆ ಪಾದಯಾತ್ರೆ ಕಂಪ್ಲಿಗೆ ಆಗಮಿಸಿತು. ಬೃಹತ್ ಪಾದಯಾತ್ರೆ ಹಿನ್ನಲೆ ಸಾಕಷ್ಟು ವಾಹನಗಳು, ಜನರು ಕಿಕ್ಕಿರಿದು ಒಂದೆಡೆ ಸೇರಿದ ಪರಿಣಾಮ ಸುಮಾರು ಒಂದೆರಡು ಕಿ.ಮೀ. ವರೆಗೂ ಟ್ರಾಫಿಕ್ ಜಾಮ್ ಕಂಡು ಬಂತು. ಈಗಾಗಲೇ ಜಿಲ್ಲಾ ಪೊಲೀಸ್ ಇಲಾಖೆಯು ಸಂಚಾರ ಬದಲಿಸಿದ ಹಿನ್ನಲೆ ಬಸ್ಸು, ಲಾರಿ ಸೇರಿದಂತೆ ಇನ್ನಿತರ ವಾಹನಗಳು ಬುಕ್ಕಸಾಗರ ಮಾರ್ಗದ ಸೇತುವೆ ಮೂಲಕ ಸಂಚಾರಕ್ಕೆ ಅನುವು ಮಾಡಿಟ್ಟಿದೆ. ಆದ 'ರೂ ಸಹ ಇಲ್ಲಿನ ವಾಹನ ದಟ್ಟಣೆ ಮಾತ್ರ ಹೆಚ್ಚಾಗಿ, ಕೆಲವೊತ್ತು ಸುಗಮ ಸಂಚಾರಕ್ಕೆ ಕಷ್ಟಕರವಾಗಿತ್ತು.*ಕಲಾ ತಂಡಗಳು ಮೆರಗು*: ಹಗಲು ವೇಷ, ಕಹಳೆ ವಾದ್ಯ, ತಾಷಾರಾಂಡೋಲ್ ಸೇರಿದಂತೆ ವಿವಿಧ ಕಲಾ ಪ್ರಕಾರಗಳೊಂದಿಗೆ ಭವ್ಯ ಸ್ವಾಗತದ ಜೊತೆಗೆ ರಸ್ತೆಯುದ್ದಕ್ಕೂ ಪಾದಯಾತ್ರೆ ನಡೆಸಲಾಯಿತು.ಈ ಸಂದರ್ಭದಲ್ಲಿ ಗಾಲಿ ಜನಾರ್ದನರೆಡ್ಡಿ ಪತ್ನಿ ಅರುಣಾ ಲಕ್ಷ್ಮೀ, ಕಂಪ್ಲಿ ಮಂಡಲ ಅಧ್ಯಕ್ಷ ಸಿ.ಡಿ.ಮಹಾದೇವ, ಮುಖಂಡರಾದ ರಾಮಲಿಂಗಾರೆಡ್ಡಿ, ಆನೆಕಲ್ ನಾರಾಯಣಸ್ವಾಮಿ, ಮುರಾ–ರಿಗೌಡ, ಗುತ್ತಿಗೆನೂರು ವಿರುಪಾಕ್ಷಿಗೌಡ, ಪಕ್ಕೀರಪ್ಪ, ಅಳ್ಳಳ್ಳಿ ವಿರೇಶ, ಡಾ.ವಿ. ಎಲ್.ಬಾಬು, ರಾಮಾಂಜಿನೇಯಲು, ಕಡೆಮನೆ ಪಂಪಾಪತಿ, ಸುದರ್ಶನರೆಡ್ಡಿ, ಮನೋಜಗೌಡ, ಬಂಡಿ ಜಡಪ್ಪ, ಬಿ. ರಮೇಶ್, ಪಾಲಾಕ್ಷ, ಗೋರ್ತಿ ಶ್ರೀನಿವಾಸ್, ಡಾಕ್ಟರ್ ವೆಂಕಟೇಶ್ ಭರಮಕ್ಕನವರ್, ಕಟ್ಟೆ ವಿಶ್ವನಾಥ್ ಬುಜ್ಜಿ ಕುಮಾರ್, ರಾಮಾಂಜನೇಯಲು ಎಸ್. ಎಂ. ನಾಗರಾಜ, ಹೊನ್ನೂರ್ ಸಾಬ್, ಬಡಿಗೇರ್ ವಿರೇಶ ಸೇರಿದಂತೆ ವಿವಿಧ ವಿಭಾಗದ ಅಧ್ಯಕ್ಷರು ಪದಾಧಿಕಾ–ರಿಗಳು ಮುಖಂಡರು, ಕಾರ್ಯಕರ್ತರು ಇದ್ದರು.*ಪೊಲೀಸ್ ಸರ್ಪಗಾವಲು* :ಬಳ್ಳಾರಿ ಚಲೋ ಪಾದಯಾತ್ರೆ ಹಿನ್ನಲೆ ಜಿಲ್ಲಾ ಪೊಲೀಸ್ ಇಲಾಖೆ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸುವ ಜೊತೆಗೆ ಪ್ರತಿ ಹಂತದಲ್ಲಿ ಫಲೀಸ್ ಸರ್ಪಗಾಲುವ ಕಂಡು ಬಂತು. ವರದಿ : ಜಿಲಾನಸಾಬ್ ಬಡಿಗೇರ್

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101